

# ಕನ್ನಡದ ಪುಣ್ಯಕೋಟಿಗೆ ಆನಿಮೇಷನ್ ಸ್ಪರ್ಶ

**ಕನ್ನಡ ಸಾಹಿತ್ಯದ ಅಮೂಲ್ಯ ನಿಧಿಗಳಲ್ಲಿ ಒಂದಾದ 'ಗೋವಿನ ಹಾಡು' ಆನಿಮೇಷನ್ ಚಿತ್ರದ ರೂಪು ತಳೆದಿದೆ. ಬೆಂಗಳೂರಿನ ರವಿಶಂಕರ್ ಅವರು ನಿರ್ಮಿಸಿರುವ ಈ ಚಿತ್ರ, ಸಂಸ್ಕೃತ ಭಾಷೆಯಲ್ಲಿ ರೂಪುಗೊಂಡಿದೆ; ವಿಶ್ವದ ಎಲ್ಲ ಭಾಗಗಳಲ್ಲಿನ ಸಹೃದಯರನ್ನು ತಲುಪುವ ಪ್ರಯತ್ನ ನಡೆಸಿದೆ.**

■ ಸಂಕೇತ್ ಗುರುದತ್ತ

ಕನ್ನಡ ನಾಡಲ್ಲಿ 'ಪುಣ್ಯಕೋಟಿ'ಯ ಕಥೆ ಮನೆಮಾತು. ಕನ್ನಡ ನೆಲದ ಸಂಸ್ಕೃತಿಯ ಸೊಗಡು ಮತ್ತು ಉದಾತ್ತತೆಯನ್ನು ಬಿಂಬಿಸುವ ಪುಣ್ಯಕೋಟಿಯ ಬದುಕಿನ 'ಗೋವಿನ ಹಾಡು' ಎಲ್ಲರಿಗೂ ಗೊತ್ತಿರುವಂತಹದ್ದೇ ಆಗಿದೆ. 'ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧುಬಳಗ' ಎನ್ನುವ ಸಾಲುಗಳು ಭಾರತೀಯ ಜೀವನಧರ್ಮದ ಅಭಿವ್ಯಕ್ತಿಯೇ ಆಗಿದೆ.

ಗೋವಿನ ಹಾಡಿನ ಮೂಲಕ ಸತ್ಯದ ಸಾರ್ವಕಾಲಿಕ ಮಹತ್ವವನ್ನು ಜಗಜ್ಜಾಹೀರುಗೊಳಿಸಲು ಬೆಂಗಳೂರಿನ ಟೆಕ್ಕಿ ರವಿಶಂಕರ್ ವೆಂಕಟೇಶ್ವರನ್ ಪ್ರಯತ್ನ ನಡೆಸಿದ್ದಾರೆ. 'ಇನ್‌ಫೋಸಿಸ್'ನ ನೌಕರಿಯನ್ನು ಬಿಟ್ಟು ಸತತ ನಾಲ್ಕು ವರ್ಷಗಳು ಶ್ರಮವಹಿಸಿ ಆನಿಮೇಷನ್ ಚಿತ್ರವೊಂದನ್ನು ನಿರ್ದೇಶಿಸಿದ್ದಾರೆ. ಅಂದಹಾಗೆ, ಈ ಚಿತ್ರ ರೂಪುಗೊಂಡಿರುವುದು ಕನ್ನಡದಲ್ಲಲ್ಲ, ಸಂಸ್ಕೃತದಲ್ಲಿ.

ಸಂಸ್ಕೃತದ ಈ ಚಿತ್ರವನ್ನು ಆನಿಮೇಷನ್ನಿನ ಮೂಲಕ ಪ್ರಸ್ತುತ ಪಡಿಸಿರುವುದರಿಂದ ದೇಶ ವಿದೇಶಗಳಲ್ಲಿನ ಎಲ್ಲ ವರ್ಗದ ಚಿತ್ರಪ್ರೇಮಿಗಳನ್ನು ತಲುಪಬಹುದು ಎನ್ನುವ ಉದ್ದೇಶ ರವಿಶಂಕರ್ ಅವರದು.

ಕನ್ನಡದ ಹೆಸರಾಂತ ನಟ, ನಿರ್ದೇಶಕರಾಗಿದ್ದ ಜಿ.ವಿ. ಅಯ್ಯರ್ ಸಂಸ್ಕೃತದಲ್ಲಿ ಹಲವು ಚಿತ್ರಗಳನ್ನು ನಿರ್ಮಿಸಿದ್ದರು. ಅಯ್ಯರ್ ಪರಂಪರೆಯ ಮುಂದುವರಿಕೆಯಂತೆ ರವಿಶಂಕರ್ ಅವರ ಚಿತ್ರವನ್ನು ನೋಡಬಹುದು.

## ದಿಗ್ಗಜರ ಸಹಕಾರ

ರವಿಶಂಕರ್ ಅವರ ಆನಿಮೇಷನ್ ಚಿತ್ರಕ್ಕೆ ಭಾರತೀಯ ಸಂಗೀತ ಲೋಕದ ದಿಗ್ಗಜರಲ್ಲೊಬ್ಬರಾದ ಇಳಯರಾಜಾ ಸಂಗೀತ ನೀಡಿದ್ದಾರೆ. ಇಳಯರಾಜಾ ಅವರು ರವಿಶಂಕರ್ ಪಾಲಿಗೆ ಮಾನಸಗುರುಗಳೂ ಹೌದು. ಚಿತ್ರದ ಬಗ್ಗೆ ತಿಳಿಸಿದಾಗ ಅವರು ಮುಕ್ತ ಮನಸ್ಸಿನಿಂದ ಸಂಗೀತ ನೀಡಲು ಒಪ್ಪಿದರಂತೆ. ಅಲ್ಲದೇ ಈ ಚಿತ್ರಕ್ಕೆ ಸಂಬಂಧಿಸಿದ ಸಂಸ್ಕೃತ ಹಾಗೂ ಇಂಗ್ಲಿಷ್ ಭಾಷೆಯಲ್ಲಿನ ಪುಸ್ತಕಗಳನ್ನು ಇಳಯರಾಜ ಲೋಕಾರ್ಪಣೆ ಮಾಡುವ ಮೂಲಕ, ರವಿಶಂಕರ್ ಅವರ ಕೆಲಸಕ್ಕೆ ಬೆಂಬಲವಾಗಿ ನಿಂತಿದ್ದಾರೆ.

ಹೆಸರಾಂತ ನಟಿ ರೇವತಿ ಹಾಗೂ ನಟ ರೋಜರ್ ನಾರಾಯಣ್ ಧ್ವನಿ ನೀಡಿರುವುದು ಚಿತ್ರದ ಮತ್ತೊಂದು ವಿಶೇಷ. ಸಂಸ್ಕೃತ ನಾಟಕಗಳಲ್ಲಿ